ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 5th September 1969.

The House met in the Assembly Chamber, Vidhana Soudha, Bangalore, at one of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Warehouses constructed by the T.A.P.M. Society, Ranibennur

10. Sri N. L. BELLAD (Ranibennur).—

Will the Minister for Development be pleased to state :—

(*a*) the number of warehouses constructed so far by the Taluk Agricultural Produce Marketing Society, Ranibennur ;

(*b*) the amount of expenditure incurred towards the laying of the foundation stone and the inauguration ceremony of each of the Warehouses ;

(*c*) whether certificate has been received from Public Works Department as to the completion of the building work of warehouses as per the plan and estimates ?

Sri P. M. NADGOUDA (Minister for Development).—

(*a*) Four Warehouses have been constructed.

(SRI P. M. NADGOUDA)

(*b*) The Expenditure in respect of the laying of foundation stone and the inauguration ceremony is as follows :—

	Expenditure in respect of laying the foundation stone	Expenditure in respect of inauguration ceremony
	Rs. p.	Rs. p.
(a) The first medium sized warehouse.	566-59	314-15
(b) The Second medium sized warehous.	348-68	650-15
(c) The third medium sized warehouse.	408-61	528-24
(d) Processing warehouse.	527-51	628-37

(*c*) Yes.

ಶ್ರೀ ಎನ್. ಎಲ್. ಬೆಲ್ಲದ್.—ಸ್ವಾಮಿ, ಲೋಕೋಪಯೋಗಿ ಇಲಾಖೆಯ ಪ್ಲಾನು ಮತ್ತು ಎಸ್ಟಿಮೇಟ್ ಪ್ರಕಾರ ರಾಣೆಬೆನ್ನೂರು ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘದವರು ಉಗ್ರಾಣಗಳನ್ನು ಕಟ್ಟಿ ದ್ದು ಮುಗಿದಿದೆ ಎಂದು ಹೇಳಿದ್ದೀರಿ. ಮತ್ತು ಈ ಬಗ್ಗೆ ಸರ್ಟಿಫಿಕೇಟ್ ಪಡೆಯಲಾಗಿದೆ ಎಂದು ಹೇಳಿದ್ದೀರಿ. ಆ ಸರ್ಟಿಫಿಕೆಟುಗಳ ಪ್ರತಿ ಸದಸ್ಯರಿಗೆ ಬೇಕಾಗಿರುವುದರಿಂದ ಅದನ್ನು ದಯವಿಟ್ಟು ಒದಗಿಸುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಈಗ ಅದು ನನ್ನಲ್ಲಿ ಇಲ್ಲ, ಬೇಕಾದರೆ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಶ್ರೀ ಎನ್. ಎಲ್. ಬೆಲ್ಲದ್.—ಆ ಸಹಕಾರ ಸಂಘದವರು ಆ ಕಟ್ಟಡಕ್ಕೆ ಎಸ್ಟಿಮೇಟಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ಮೊದಲನೆಯ ಗೋಡೌನಿಗೆ 296-60 ರೂಪಾಯಿಗಳು ಖರ್ಚಾಗಿದೆ. ಎರಡನೆಯದಕ್ಕೆ ರೂ. 295-60 ಪೈಸೆಗಳು ಖರ್ಚಾಗಿದೆ. ಮೂರನೆಯದಕ್ಕೆ 1108-00 ರೂಪಾಯಿಗಳು ಖರ್ಚಾಗಿದೆ. ನಾಲ್ಕನೆಯದಕ್ಕೆ 12,093 ರೂಪಾಯಿಗಳು ಖರ್ಚಾಗಿದೆ, ಒಟ್ಟು ಇಷ್ಟು ಹಣ ಹೆಚ್ಚಿಗೆ ಖರ್ಚಾಗಿದೆ. ಅದಕ್ಕೆ ಅವರು ಇಲಾಖೆಯ ಮಂಜೂರಾತಿಯನ್ನು ತೆಗೆದು ಕೊಂಡಿಲ್ಲ. ಆದ್ದರಿಂದ ಆ ಬಗ್ಗೆ ಏನು ಕ್ರಮವನ್ನು ತಗೆದುಕೊಳ್ಳಬೇಕೆಂದು ನಾವು ತನಿಖೆ ಮಾಡುತ್ತಿದ್ದೇವೆ.

Sri SIDDAIAH KASHIMATH.—May I know whether the Auditor has made any remark on it ?

Sri B. L. GOWDA.—He has observed that there is excess payment over and above the estimate and the irregularity may be set right.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಅಗ್ರಿಕರ್‌ಚರಲ್ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು ನಾನಾ ಬಾಬಿನಲ್ಲಿ ಹಣವನ್ನು ದುರುಪಯೋಗ ಮಾಡುತ್ತಿದ್ದರೂ ಸಹ ಈ ಇಲಾಖೆಗೆ

† Indicates that the remarks or speeches have not been revised by the member concerned.

ಸಂಬಂಧಪಟ್ಟ ಮಂತ್ರಿಗಳು ಮತ್ತು ರಿಜಿಸ್ಟ್ರಾರ್ ಅವರು ಗೋ ಸ್ಲೋ ಪಾಲಿಸಿ ಹಾಕಿಕೊಂಡು ಅವರನ್ನು ರಕ್ಷಣೆ ಮಾಡಿಕೊಂಡು ಬರುತ್ತಾ ಇರುವುದು ನಿಜವಲ್ಲವೇ ?

ಶ್ರೀ ಬಿ. ಎಲ್. ಗೌಡ.—ಅದು ನಿಜವಲ್ಲ. ಅಕ್ರಮಗಳು ಕಂಡುಬಂದರೆ ಅಂಥಾ ಸೊಸೈಟಿಗಳನ್ನು ಸೂಪರ್‌ಸೀಡ್‌ಮಾಡಿ ಸರ್ಕಾರದ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುತ್ತೇವೆ. ಯಾರಾದರೂ ತಪ್ಪುಮಾಡಿದ್ದರೆ ಅದನ್ನು ತನಿಖೆ ಮಾಡುತ್ತೇವೆ. ಅಕ್ರಮಗಳು ನಡೆದಾಗ ಮಂತ್ರಿಗಳು ಯಾರಿಗೂ ರಕ್ಷಣೆ ಕೊಡುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ.

ಶ್ರೀ ಎಸ್. ಎಂ. ತಮ್ಮಯ್ಯ.—ನ್ಯಾಯವಿ, ಈಗ ಲೋಕಲ್‌ಬೋರ್ಡುಗಳಲ್ಲಿ ಇಷ್ಟುಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟ ಕಟ್ಟಡವನ್ನು ಕಟ್ಟಬೇಕಾಗಿದ್ದರೆ ಅದನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವಹಿಸಬೇಕೆಂದು ಇದೆ. ಈ ಪದ್ಧತಿ ಸಹಕಾರ ಇಲಾಖೆಯಲ್ಲಿಯೂ ಇದೆಯೇ ?

ಶ್ರೀ ಬಿ. ಎಲ್. ಗೌಡ.—ನಮ್ಮ ಸಹಕಾರ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜನಿಯರು ಇದ್ದಾರೆ. 50 ಸಾವಿರ ರೂಪಾಯಿಗಳ ಒಳಗಡೆ ಖರ್ಚಾಗತಕ್ಕಂಥ ಕಟ್ಟಡಗಳನ್ನು ಅವರೇ ಕಟ್ಟಿಸುತ್ತಾರೆ. 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗತಕ್ಕಂಥ ಕಟ್ಟಡಗಳನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಗೆ ವಹಿಸಿ ಅದನ್ನು ಮಾಡಲಾಗುತ್ತಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಸೊಸೈಟಿಯ ಬಗ್ಗೆ ನಾಲ್ಕಾರು ಪ್ರಶ್ನೆಗಳು ಬಂದು ಅದರಲ್ಲಿ ಹಣ ಲೂಪವಾಗಿದೆ ಎಂದು ಅಧ್ಯಕ್ಷರ ಮೇಲೆ ದೂರು ಬಂದಿದ್ದರೂ ಕೂಡ ತಾವು ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದೇವೆ, ಎಂದು ಹೇಳುತ್ತಿದ್ದೀರಿ, ಆದ್ದರಿಂದ ಅವರ ಮೇಲೆ ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಈ ರಾಣಿಬೆನ್ನೂರು ಸೊಸೈಟಿಯ ಬಗ್ಗೆ ಒಂದು ಪ್ರಶ್ನೆ ಬಂದಿರುವುದು ನಿಜ. ಅದರಲ್ಲಿ ಇರ್ರೆಗ್ಯುಲ್ಯಾರಿಟೀಸ್ ಇರುವುದು ನಿಜ. ಆದಕ್ಕಾಗಿ ಅದನ್ನು ಸೂಪರ್‌ಸೀಡ್ ಮಾಡಿದ್ದೇವೆ. ಈಗ ಅಲ್ಲಿ ನಡೆದಿರತಕ್ಕ ಅಕ್ರಮಗಳ ಬಗ್ಗೆ ತನಿಖೆಮಾಡಿ ಅದರಲ್ಲಿ ಏನಾದರೂ ವೈಯಕ್ತಿಕವಾದ ಜವಾಬ್ದಾರಿಗಳು ಕಂಡುಬಂದರೆ ಅಂಥವರಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಅವರಮೇಲೆ ಕ್ರಿಮಿನಲ್ ಆಗಲೀ, ಸಿವಿಲ್ ಆಗಲೀ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಬೋಳಾ ರಘುರಾಮಶೆಟ್ಟಿ.—ಈ ನಾಲ್ಕು ಉಗ್ರಾಣಗಳನ್ನು ಪ್ರಾರಂಭೋತ್ಸವ ಮಾಡಲು ಸುಮಾರು ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರ ಔಚಿತ್ಯ ಏನು ? ಮಂತ್ರಿಗಳನ್ನು ಏನಾದರು ಕರೆದಿದ್ದರೇ ಹೇಗೆ ?

ಶ್ರೀ ಬಿ. ಎಲ್. ಗೌಡ.—ಯಾರನ್ನು ಕರೆದಿದ್ದರು ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಈ ಒಂದು ಸಂಘದಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಸರ್ಕಾರದ ನಜರಿಗೆ ಕಳೆದ ಮೂರು ವರ್ಷಗಳಿಂದ ತರುತ್ತಿದ್ದರೂ ಸರ್ಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲ. ಈ ಉಗ್ರಾಣಗಳನ್ನು ಪ್ರಾರಂಭೋತ್ಸವ ಮಾಡಲು ಸಹಕಾರ ಮಂತ್ರಿಗಳನ್ನು ಮತ್ತು ರಿಜಿಸ್ಟ್ರಾರ್ ಅವರನ್ನು ಕರೆಸಿದ್ದರು. ಸುಮಾರು ನಾಲ್ಕು ಸಾವಿರ ರೂಪಾಯಿಗಳವರೆಗೆ ಇದಕ್ಕಾಗಿ ಖರ್ಚು ಮಾಡಿದ್ದಾರೆ. ಇಷ್ಟೊಂದು ಅನ್ಯಾಯಗಳು ಈ ಸಂಘದಲ್ಲಿ ನಡೆದಿದ್ದರೂ ಕೂಡ ತನಿಖೆಯನ್ನು ಜಾಗ್ರತೆ ಮಾಡಿಸದಿರುವುದಕ್ಕೆ ಕಾರಣವೇನು ? ಚೆನ್ನಾಗಿ ನಡೆಯುತ್ತಿರುವ ಸಂಘಗಳ ವಿಚಾರದಲ್ಲಿ ಬೇಕಾದರೆ ಸೆಕ್ಷನ್ 54ರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ. ಅವ್ಯವಹಾರ ನಡೆಯುತ್ತಿರುವ ಸಂಘಗಳ ವಿಚಾರದಲ್ಲಿ ತನಿಖೆ ಮಾಡದೆ ಸುಮ್ಮನೆ ಇರಲಕ್ಕೆ ಯಾರ ಪ್ರಚೋದನೆ ಇದೆ ಎಂದು ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ನಾನು ಆಗಲೇ ಹೇಳಿದ್ದೇನೆ, ಸರ್ಕಾರವೇ ಆಗಲೀ ಮಂತ್ರಿಗಳೇ ಆಗಲಿ ಅವ್ಯವಹಾರ ನಡೆಯುತ್ತಿರುವ ಯಾವ ಸಹಕಾರ ಸಂಘಗಳಿಗೂ ಕೂಡ ರಕ್ಷಣೆ ಕೊಡುವುದಿಲ್ಲ ವೆಂದು.

ಶ್ರೀ ಎಂ. ನಾಗಪ್ಪ.—ಅಡಿಗಲ್ಲು ಸಮಾರಂಭಕ್ಕೆ ಆಗಲೀ, ಪ್ರಾರಂಭೋತ್ಸವದ ಸಮಾರಂಭಕ್ಕೇ ಆಗಲಿ ಹಣ ಖರ್ಚು ಮಾಡುವುದು ಸರಿಯಲ್ಲ ಎಂಬ ಬಗ್ಗೆ ಒಂದು ನಿಯಮವನ್ನು ಮಾಡುತ್ತೀರಾ ? ಏಕೆಂದರೆ ಕೆಲವು ಕಡೆಗಳಲ್ಲಿ 10 ಸಾವಿರ ರೂಪಾಯಿಗಳವರೆಗೂ ಸಹ ಖರ್ಚು ಮಾಡುತ್ತಿದ್ದಾರೆ. ಒಂದು ಪಕ್ಷ ಖರ್ಚು ಮಾಡಬೇಕಾದರೆ ಸದಸ್ಯರುಗಳೇ ಕಾಂಟ್ರಿಬ್ಯೂಷನ್ ಹಾಕಿಕೊಂಡು ಮಾಡುವಂತೆ ಒಂದು ನಿಯಮವನ್ನು ಜಾರಿಗೆ ತರುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಸಹಕಾರ ಸಂಘಗಳು ಬಹುತೇಕವಾಗಿ ಸ್ವಯಂ ಅಧಿಕಾರವುಳ್ಳ ಸಂಸ್ಥೆಗಳು. ನಾವೇನಾದರೂ ನಿಯಮ ಹಾಕಿದರೆ ನಮ್ಮ ಅಡಳಿತದಲ್ಲಿ ಸರ್ಕಾರದವರು ಹಸ್ತಕ್ಷೇಪ ಮಾಡುತ್ತಾರೆಂದು ಹೇಳುತ್ತಾರೆ. ಮಾನ್ಯ ನಾಗಪ್ಪನವರು ಹೇಳಿದ ವಿಚಾರವನ್ನು ನಾನು ಸಹ ಒಪ್ಪುತ್ತೇನೆ. ಆ ರೀತಿ ಖರ್ಚು ಮಾಡುವುದು ಸರಿಯಲ್ಲ. ಆದರೆ ಅದು ನೀತಿಯ ಪ್ರಶ್ನೆಯಾಗುತ್ತದೆ.

ಶ್ರೀ ಎನ್. ಎರ್. ಬೆಲ್ಲದ್.—ಸಹಕಾರ ಸಂಘಗಳು ಸ್ವಯಂ ಅಧಿಕಾರವುಳ್ಳ ಸಂಸ್ಥೆಗಳು ಎಂದು ಹೇಳಿದಿರಿ. ಈ ಸಹಕಾರ ಮಾರಾಟ ಸಂಘದ ಷೇರು ಬಂಡವಾಳ ಕೇವಲ 30 ಸಾವಿರ ರೂಪಾಯಿಗಳು ಆದರೂ ಕೂಡ ಸರ್ಕಾರದವರು 89 ಸಾವಿರ ರೂಪಾಯಿಗಳ ಸಬ್ಸಿಡಿ ಕೊಟ್ಟಿದ್ದಾರೆ. ಮತ್ತು ಏಳು ಲಕ್ಷದ 10 ಸಾವಿರ ರೂಪಾಯಿಗಳವರೆಗೆ ಷೇರು ರೂಪದಲ್ಲಿ ಹಣವನ್ನು ಆ ಸಂಘದಲ್ಲಿ ತೊಡಗಿಸಿದ್ದಾರೆ. ಇಷ್ಟೊಂದು ಹಣವನ್ನು ಅಲ್ಲಿ ಸರ್ಕಾರದವರು ತೊಡಗಿಸಿರುವುದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿ ಅವ್ಯವಹಾರ ನಡೆಯುವುದನ್ನು ತಪ್ಪಿಸಲು ಮತ್ತು ಆ ಸೊಸೈಟಿಯ ಹಿತರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಲ್ಲವೇ?

ಶ್ರೀ ಬಿ. ಎಲ್. ಗೌಡ.—ಅದೇ ದೃಷ್ಟಿಯಿಂದ ಈಗ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದೇವೆ.

Grant of subsidy to Semi-Nomadic tribes for construeting houses in Khanapur and Belgaum Taluks

103. Sri N. B. SIRDESAI (Khanapur).—

Will the Minister for Social Welfare be pleased to state :—

(*a*) the number of Dombari, *i.e.*, Semi-Nomadic tribe families residing in Khanapur and Belgaum Taluk;

(*b*) whether subsidy has been granted to each family for the construction of houses since 1965 to 1968 and the number of families that were granted such subsidy ;

(*c*) whether Taluka Development Board, Khanapur has represented to Government stating that Housing grant of Rs. 1,500 only for each Harijan family is too meagre and that grant should be increased sufficiently ?

Sri V. L. PATIL (Mniister for Social Welfare).—

(*a*) Khanapur Taluk 84 families. Belgaum Taluk 73 families.

(*b*) Yes. 73 families in Belgaum Taluk and 25 families in Khanapur Taluk have been granted subsidies for construction of houses.

(*c*) No.

Sri N. B. SIRDESAI.—May I know whether Government are going to remove the disparity already caused by granting subsidy to only 25 families and leaving all the rest of the families disappointed ?

†ಶ್ರೀ ವಿ. ಎರ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಖಾನಾಪುರದಲ್ಲಿ ಒಟ್ಟು 84 ಕುಟುಂಬಗಳು ಇವೆ. ಅದರಲ್ಲಿ 14 ಕುಟುಂಬಗಳಿಗೆ ಮನೆಗಳು ಇವೆ. 1965ರಿಂದ 1968 ರವರೆಗೆ ಸುಮಾರು 25 ಕುಟುಂಬಗಳಿಗೆ ಮನೆಗಳನ್ನು ಮಂಜೂರು ಮಾಡರಾಗಿದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಮತ್ತೆ 10 ಮನೆಗಳನ್ನು ಕಟ್ಟಿಸಿ ಕೊಡರಾಗಿದೆ. ಮಾನ್ಯ ಸದಸ್ಯರು ಮತ್ತೆ